# ವೆಬ್ ಸೀರೀಸ್ ಆಟ ಶುರು ಆಗಬೇಕಿದೆ

**ಶರತ್ ಪದ್ಮನಾಭ್**
ಝೀ ಕನ್ನಡದ
'ನಾ ನಿನ್ನ ಬಿಡಲಾರೆ'ಯ ಶರತ್

◆ **'ಅನಿಮಾ' ಸಿನಿಮಾದ ಅನುಭವ ಹೇಗಿತ್ತು?**

ಅದೇ ನನ್ನ ಮೊದಲ ಸಿನಿಮಾ. ಥ್ರಿಲ್ಲರ್ ಜಾನರ್ ಟ್ರ್ಯಾಕ್‌ನಲ್ಲಿ ರೂಪಿಸಲಾಗಿದೆ. ಸಾಂಪ್ರದಾಯಿಕ ಹೀರೊಯಿಸಂ ಜಾಡನ್ನು ಬಿಟ್ಟು, ಸಮಕಾಲೀನ ಸಂದರ್ಭಕ್ಕೆ ಹೊಂದುವಂತಹ ಕಥೆಯನ್ನು ಇಟ್ಟುಕೊಂಡು ಸಿನಿಮಾ ಮಾಡಿದ್ದಾರೆ. ಅದರ ಚಿತ್ರೀಕರಣ ಬಹುತೇಕ ಮುಗಿದಿದೆ. ಪಾತ್ರಗಳ ಆಧಾರದ ಮೇಲೆ ಕಥೆ ನಿಲ್ಲುತ್ತದೆ. ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಗುಣವನ್ನು ಸಿನಿಮಾ ಹೊಂದಿದೆ ಎಂದುಕೊಂಡಿದ್ದೇನೆ.

◆ **ಸೀರಿಯಲ್‌ನಿಂದ ಸಿನಿಮಾಕ್ಕೆ ಹೋದ ಸಂದರ್ಭ, ಅದರ ಅನುಭವ ಹೇಗಿತ್ತು?**

ಸೀರಿಯಲ್‌ನಲ್ಲಿ ನಿತ್ಯವೂ ಹತ್ತಾರು ದೃಶ್ಯಗಳ ಚಿತ್ರೀಕರಣ ಮಾಡುತ್ತೇವೆ. ಸಿನಿಮಾದಲ್ಲಿ ಅಷ್ಟು ದೀರ್ಘವಾದ ಕೆಲಸ ಇರುವುದಿಲ್ಲ. ದಿನಕ್ಕೆ ಒಂದೆರಡು ದೃಶ್ಯಗಳನ್ನು ಮಾಡಿದರೂ ಡೀಟೇಲಾಗಿ ಮಾಡುತ್ತೇವೆ. ಒಂದೊಂದು ಶಾಟ್‌ಗೂ ಸಮಯ ಇರುತ್ತದೆ. ಸೃಜನಶೀಲವಾಗಿ ಕೊನೆ ಕ್ಷಣದವರೆಗೂ ಯೋಚನೆ ಮಾಡುತ್ತಲೇ ಇರುತ್ತೇವೆ. ಈ ಕಾರಣಕ್ಕೆ ಸಿನಿಮಾ ನಿರ್ಮಾಣ ಆಸಕ್ತಿದಾಯಕವಾಗಿರುತ್ತದೆ. ಧಾರಾವಾಹಿಗಳಲ್ಲಿ ವರ್ಷಗಟ್ಟಲೆ ಹೇಳಬಹುದಾದ ಕಥೆಯನ್ನು ಒಂದೆರಡು ಗಂಟೆಯಲ್ಲೇ ಹೇಳಬಹುದಾದ ಸೂಕ್ಷ್ಮತೆ ಮತ್ತು ಸಾಮರ್ಥ್ಯ ಅದಕ್ಕಿದೆ.

◆ **'ಪಾರು', 'ಪುಟ್ಟಮಲ್ಲಿ', 'ನಾ ನಿನ್ನ ಬಿಡಲಾರೆ'... ಪಾತ್ರ ಮತ್ತು ಒಬ್ಬ ನಟನಲ್ಲಿ ಆದ ಬದಲಾವಣೆಗಳೇನು?**

ನಟನಾಗಿ ನಿತ್ಯವೂ ಕಲಿಯಲೇಬೇಕಾಗಿರುತ್ತದೆ ಅದು ಬೇರೆಯ ವಿಷಯ. ಆದರೆ ಇದುವರೆಗಿನ ಬೆಳವಣಿಗೆ ಸ್ವತಃ ನನಗೆ ಗೊತ್ತಾಗಿದೆ. ಒಂದು ಸೀನಿನ ಪೇಪರ್ ಕೈಗೆ ಸಿಕ್ಕತಕ್ಷಣ ಇದನ್ನು ಹೇಗೆ ಮಾಡಬಹುದು ಎನ್ನುವ ದೃಶ್ಯ ಕಣ್ಣ ಮುಂದೆ ಹಾದು ಹೋಗುತ್ತದೆ. ನಿರ್ದೇಶಕರು ಏನು ಮಾಡುತ್ತಿದ್ದಾರೆ. ಅವರ ಯೋಚನೆಯ ಲಹರಿಯನ್ನು ತಿಳಿದುಕೊಳ್ಳುವುದು ಕೂಡ ಸುಲಭ ಅನ್ನಿಸಿದೆ. ಆರಂಭದಲ್ಲಿ ಈ ತಿಳುವಳಿಕೆ ಇರಲಿಲ್ಲ. ನನ್ನ ಪಾತ್ರಕ್ಕೆ ಸೀಮಿತ ಯೋಚನೆ ಮಾಡುತ್ತಿದ್ದ ಬಗೆ ಬದಲಾಗಿದೆ. ಮುಂದಿನ ಹಂತದ ಬಗ್ಗೆಯೂ ಯೋಚನೆ ಹರಿಯುತ್ತದೆ. ಅದೆಲ್ಲ ನಮಗೆ ಗೊತ್ತಿಲ್ಲದಂತೆ ಸಹಜವಾಗಿ ಬೆಳೆಯುತ್ತದೆ. ಕ್ಯಾಮೆರಾ ಎದುರು ಇಟ್ಟರೆ ಈ ರೀತಿ ಮಾಡಬೇಕು ಎಂದು ಗೊತ್ತಾಗುತ್ತದೆ. ಒಬ್ಬ ಕಲಾವಿದನಾಗಿ ಬೆಳೆದಿದ್ದೇನೆ. ಈ ನನ್ನ ಬೆಳವಣಿಗೆಗೆ ಕಾರಣರಾದವರು ನಿರ್ದೇಶಕರು ಮತ್ತು ಸಹನಟರು. ಈ ಹಿನ್ನೆಲೆಯಲ್ಲಿ ಅವರಿಗೆ ಕ್ರೆಡಿಟ್ ಹೋಗಬೇಕು. ನಾನು ವೃತ್ತಿ ಆರಂಭಿಸಿದ ದಿನ ಏನೂ ಗೊತ್ತಿರಲಿಲ್ಲ. ಎಲ್ಲ ಇಲ್ಲೇ ಬಂದು ಕಲಿತಿದ್ದು, ನಟನಾಗಿ ವೈಯಕ್ತಿಕವಾಗಿ ಹೀಗೆ ಬೆಳೆದಿದ್ದೇನೆ.

ಪಾತ್ರದಲ್ಲಿ ನಾನು ಮೊದಲು ಆರ್‌ಜೆ ಪಾತ್ರವನ್ನು ನಿರ್ವಹಿಸಿದ್ದೆ. ಅದು ತಾರುಣ್ಯದ ಲವಲವಿಕೆಯಿಂದ ಕೂಡಿತ್ತು. 'ಪುಟ್ಟಮಲ್ಲಿ'ಯಲ್ಲಿ ಅದಕ್ಕಿಂತ ಮಾಗಿದ ಪಾತ್ರ ಸಿಕ್ಕಿತ್ತು. 'ಪಾರು' ಅತ್ಯಂತ ಜವಾಬ್ದಾರಿಯ ಪಾತ್ರ ಮಾಡಿದೆ. ಸೀರಿಯಲ್‌ನಲ್ಲಿ ಸಿಗಬಹುದಾದ ಅಲ್ಪ ಕಾಲ ಅವಕಾಶದಲ್ಲಿ ಇನ್ನೇನು ಮಾಡಬಹುದು ಎಂದು ಯೋಚಿಸುತ್ತಿದ್ದೆ. ಆರೇಳು ವರ್ಷದಲ್ಲಿ ಎಲ್ಲ ರೀತಿಯ ಪಾತ್ರಗಳನ್ನು ಮಾಡಿದ್ದೇನೆ ಎಂದು ಸಿನಿಮಾ ಮಾಡುತ್ತಿದ್ದೆ. ಆಗ ಇನ್ನುಮುಂದೆ ಸೀರಿಯಲ್ ಬೇಡ ಅಂದುಕೊಂಡಿದ್ದೆ. ಏಕೆಂದರೆ ನಿತ್ಯವೂ ಕೆಲಸದಲ್ಲಿ ಏನೋ ವಿಶೇಷ ಅನ್ನಿಸಬೇಕು. ಈ ಪಾತ್ರಕ್ಕೆ ಕರೆ ಬಂದಾಗ 'ನೀವು ಸೂಕ್ತ ಆಗುತ್ತೀರಿ' ಎಂದರು. ಕಥೆ ಕೇಳಿದಾಗ ನನಗೂ ಏನೋ ವಿಶೇಷ ಎಂದು ಅನ್ನಿಸಿತು. ಕೇಳಿದ ತಕ್ಷಣ ಮಾಡಲು ಮಾತು ಕೊಟ್ಟೆ. ಫಲಿತಾಂಶ ಚೆನ್ನಾಗಿದೆ.



◆ **ಐಟಿ ಕ್ಷೇತ್ರ ಬಿಡುವ ಸಂದರ್ಭ ಹೇಗೆ ಬಂತು?**

ಐಟಿ ರಂಗದಲ್ಲಿ ನಾಲ್ಕು ವರ್ಷ ಕೆಲಸ ಮಾಡಿದ್ದೆ. ಅದನ್ನು ಬಿಡಬೇಕು ಎಂದು ಅನ್ನಿಸಿರಲಿಲ್ಲ ಕೂಡ. ನನಗೆ ಗ್ರಾಫಿಕ್ ಡಿಸೈನ್ ಬಗ್ಗೆ ಆಸಕ್ತಿ ಇತ್ತು. ಫ್ರೀಲಾನ್ಸ್‌ಆಗಿ ಆ ಕೆಲಸವನ್ನು ಆರಂಭಿಸಿದೆ. ಮಾಡುತ್ತಿದ್ದಾಗ ಅದು ಚೆನ್ನಾಗಿ ಆಗುತ್ತಿತ್ತು. ಐಟಿ ಕೆಲಸಕ್ಕಿಂತ ಇದೇ ಅನುಕೂಲ ಆಗಬಹುದು ಎಂದು ಟೆಕ್ಕಿ ಕೆಲಸ ಬಿಟ್ಟೆ. ಗ್ರಾಫಿಕ್ ಡಿಸೈನರ್ ಆಗಿ ಫ್ರೀಲಾನ್ಸ್ ಮಾಡುತ್ತಿದ್ದ ಸಂದರ್ಭದಲ್ಲಿಯೇ ಸೀರಿಯಲ್ ಮಾಡುವ ಯೋಚನೆ ಬಂತು. ಮನೆಯಲ್ಲೇ ಇದ್ದಿದ್ದರಿಂದ ಆಡಿಷನ್ ಕೊಡುವುದು ಸುಲಭ ಆಗುತ್ತಿತ್ತು. ನಟನೆಯ ಜೊತೆ ಫ್ರೀಲಾನ್ಸ್ ಕೆಲಸ ಮಾಡಬಹುದು ಎಂದು ಹಾಗೇಯೇ ಮಾಡುತ್ತಿದ್ದೆ. ಈಗ ಎರಡೂ ಕೆಲಸವನ್ನು ಒಟ್ಟಿಗೆ ನಿರ್ವಹಿಸಲು ಸಾಧ್ಯ ಆಗುತ್ತಿಲ್ಲ.

◆ **ಮುಂದಿನ ಪಾತ್ರದ ಬಗ್ಗೆ ನಿಮಗೆ ಯಾವ ಕಲ್ಪನೆ ಇದೆ?**

ಸಿನಿಮಾಗಳನ್ನು ಮಾಡಬೇಕು. ಅದರಲ್ಲೂ ವೆಬ್ ಸೀರೀಸ್ ಶುರು ಮಾಡಬೇಕು ಎನ್ನುವ ಆಲೋಚನೆ ಇದೆ. ಕನ್ನಡದಲ್ಲಿ 'ಅಯ್ಯನ ಮನೆ' ಬಿಡುಗಡೆ ಆಗಿದೆ. ಅದು ಒಳ್ಳೆಯ ಸೌಂಡ್ ಮಾಡುತ್ತಿದೆ. ಝೀ ಕನ್ನಡ ವೆಬ್ ಸೀರೀಸ್ ಆರಂಭಿಸಲಿದೆ. ಒಳ್ಳೆಯ ಅವಕಾಶ ಸಿಗಬಹುದು ಎನ್ನುವ ನಿರೀಕ್ಷೆ ನನಗೆ ಇದೆ. ಸಿನಿಮಾ ವೆಬ್ ಸೀರೀಸ್‌ಗಳಲ್ಲಿ ಒಳ್ಳೆಯ ಪಾತ್ರ ಮಾಡಬೇಕು.

◆ **ನಟನೆಯ ಜೊತೆ ಬೇರೆ ಇನ್ನೇನೂ ಮಾಡುತ್ತಿದ್ದೀರಿ?**

ಸೀರಿಯಲ್ ಆರಂಭದ ಹಂತದಲ್ಲಿ ಇರುವುದರಿಂದ ತಿಂಗಳೆಲ್ಲ ಚಿತ್ರೀಕರಣಕ್ಕೆ ಸಮಯ ಕೊಡಬೇಕಾಗುತ್ತದೆ. ಬೇರೆ ಇನ್ನೇನೂ ಮಾಡಲು ಸಾಧ್ಯ ಆಗುತ್ತಿಲ್ಲ. ಸಿನಿಮಾ ನೋಡುವುದರಿಂದಲೇ ನಾವು ಕಲಿಯುವುದು. ಈ ಕಾರಣಕ್ಕೆ ಸಿನಿಮಾ ಮತ್ತು ವೆಬ್ ಸೀರೀಸ್ ನೋಡುತ್ತೇನೆ. ಅದೇ ನನ್ನ ಮೇಜರ್ ಕಲಿಕೆಯ ಕೇಂದ್ರ. ಜಗತ್ತಿನ ಒಳ್ಳೆಯ ಸಿನಿಮಾಗಳು ಒಂದು ಬಟನ್‌ನಲ್ಲಿ ಸಿಗುವುದರಿಂದ ನೋಡುವುದಕ್ಕೆ ಅನುಕೂಲ ಆಗಿದೆ. ಸಮಯ ಸಿಕ್ಕಾಗೆಲ್ಲ ಸಿನಿಮಾ ನೋಡುತ್ತೇನೆ. ಥೀಯಟರ್‌ನಲ್ಲಿ ಸಿನಿಮಾ ನೋಡುವುದು ಖುಷಿ ಕೊಡುತ್ತದೆ. ಸಿನಿಮಾ ವೀಕ್ಷಣೆ ನನ್ನೊಳಗೆ ಒಬ್ಬ ಚಿಂತಕನನ್ನು ಹುಟ್ಟುಹಾಕುತ್ತದೆ.

■ **ರಾಘವೇಂದ್ರ ಕೆ.**